# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1080 |
| ಮಾನ್ಯ ಸದಸ್ಯರ ಹೆಸರು | ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 20.08.2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಪೋಡಿ ರದ್ಧತಿ ಎಂದರೆ ಏನು; ಯಾವ ಸಂದರ್ಭದಲ್ಲಿ ಪೋಡಿಯನ್ನು ರದ್ದು ಮಾಡುವಂತೆ ಕೋರಬಹುದು; | ಹಕ್ಕುದಾರರ ಹಕ್ಕು / ಅನುಭವಕ್ಕೂ ಮತ್ತು ಭೂದಾಖಲೆಗಳಂತೆ ಗಡಿ / ವಿಸ್ತೀರ್ಣಕ್ಕೂ ತಾಳೆಯಾಗದ ಸಂದರ್ಭದಲ್ಲಿ ದಾಖಲೆಗಳನ್ನು ಪರಿಶೀಲಿಸಿ, ವಿಚಾರಣೆ ನಡೆಸಿ, ಪೋಡಿ ದಾಖಲೆಗಳು ತಪ್ಪಾಗಿದ್ದಲ್ಲಿ ಅಂತಹ ಪೋಡಿ ದಾಖಲೆಗಳನ್ನು ವಜಾಗೊಳಿಸಿ, ಆನಂತರ ನಿಯಮಾನುಸಾರ ಹಕ್ಕುದಾರರ ಹಕ್ಕು ಮತ್ತು ಅನುಭವ ಆಧರಿಸಿ ಹೊಸದಾಗಿ ನಿಯಮಾನುಸಾರ ಸರಿಯಾದ ಪೋಡಿ ದಾಖಲೆ ತಯಾರಿಸಲು ಆದೇಶಿಸುವುದಕ್ಕೆ ಪೋಡಿ ರದ್ದು ಮಾಡುವುದು ಎನ್ನುತ್ತಾರೆ<br><br>ಅಳತೆ ಕಾಲದಲ್ಲಿ ಆಗಿರುವ ತಪ್ಪು (ಮೋಜಿಣಿ ತಪ್ಪು) ಅಥವಾ ಆನಂತರದಲ್ಲಿ ಹಕ್ಕುದಾರರು ತಮ್ಮ ಅನುಭವ ಮತ್ತು ಹಕ್ಕು ದಾಖಲೆಗಳಲ್ಲಿ ಮಾಡಿಕೊಂಡಿರುವ ಬದಲಾವಣೆ ಇತ್ಯಾದಿ ಕಾರಣಗಳಿಂದಾಗಿ ಕೆಲವು ಸಂದರ್ಭದಲ್ಲಿ ಹಕ್ಕುದಾರರ ಹಕ್ಕು/ಅನುಭವಕ್ಕೂ ಮತ್ತು ಭೂದಾಖಲೆಗಳಂತೆ ಗಡಿ/ವಿಸ್ತೀರ್ಣಕ್ಕೂ ತಾಳೆಯಾಗದೆ ಇದ್ದಲ್ಲಿ ಹಕ್ಕುದಾರರು ತಮ್ಮ ಜಮೀನಿನ ಪೋಡಿ ದಾಖಲೆಗಳನ್ನು ರದ್ದುಪಡಿಸಲು ಕೋರಿ ಭೂಮಾಪನ ಇಲಾಖೆಯ ವಿವಿಧ ಹಂತದ ಅಧಿಕಾರಿಗಳ ಬಳಿ ಕರ್ನಾಟಕ ಭೂಕಂದಾಯ ಅಧಿನಿಯಮ 1964 ಮತ್ತು ನಿಯಮಾವಳಿ ಗಳು 1966 ರಡಿ 1ನೇ & 2ನೇ ಮೇಲ್ಮನವಿ ಹಾಗೂ ಮರುಪರಿಶೀಲನಾ ಅರ್ಜಿ ಸಲ್ಲಿಸಬಹುದಾಗಿದೆ. |
| (ಆ) | ಭೂಮಾಪಕರು ಆಕಸ್ಮಿಕವಾಗಿ ತಪ್ಪಾಗಿ ಪೋಡಿಯನ್ನು ಮಾಡಿದ್ದಲ್ಲಿ, ಪೋಡಿಗೆ ಒಳಪಟ್ಟ ಎಲ್ಲಾ ಭೂಮಾಲೀಕರು ಲಿಖಿತವಾಗಿ ಒಪ್ಪಿಗೆ ಸೂಚಿಸಿದ್ದಲ್ಲಿ, ಪೋಡಿ ರದ್ಧತಿಗೆ ಅನುಸರಿಸುವ ಪ್ರಕ್ರಿಯೆಯೇನು; | ಯಾವುದೇ ಜಮೀನನ್ನು ಪೋಡಿ ಮಾಡುವ ಸಂದರ್ಭ ದಲ್ಲಿ ಭೂಮಾಪಕರು ಆಕಸ್ಮಿಕವಾಗಿ ತಪ್ಪಾಗಿ ಪೋಡಿ ಯನ್ನು ಮಾಡಿ, ನಂತರ ಆ ಜಮೀನಿನ ಎಲ್ಲಾ ಭೂಮಾಲೀಕರು ಲಿಖಿತವಾಗಿ ಒಪ್ಪಿಗೆ ಸೂಚಿಸಿದಲ್ಲಿ ಸಕ್ಷಮ ಮೇಲ್ಮನವಿ ಪ್ರಾಧಿಕಾರಗಳು ಸ್ವಯಂಪ್ರೇರಿತವಾಗಿ ಹಕ್ಕುದಾಖಲೆ (ಚಕ್ಕುಬಂದಿ) ಮತ್ತು ಅನುಭವ ಪರಿಶೀಲಿಸಿ, ಸಂಬಂಧಿಸಿದವರಿಗೆ ನೋಟೀಸ್ ನೀಡಿ, ವಿಚಾರಣೆ ನಡೆಸಿ ಪ್ರಶ್ನಿತ ಭೂದಾಖಲೆಗಳು ಹಕ್ಕುದಾರರ ಹಕ್ಕು |

<table>
<tr><td></td><td></td><td>& ಅನುಭವಕೆ ವ್ಯತಿರಿಕ್ತವಾಗಿರುವುದು ಕಂಡು ಬಂದಲ್ಲಿ ಅಂತಹ ಪೋಡಿ ದಾಖಲೆಗಳನ್ನು ರದ್ದುಗೊಳಿಸಲಾಗುತ್ತದೆ.</td></tr>
<tr><td>(ಇ)</td><td>ಪೋಡಿ ಮಾಡುವ ಪ್ರಕ್ರಿಯೆಗಿಂತ, ಪೋಡಿ ರದ್ದತಿಯ ಹೆಚ್ಚಿನ ಸಮಯ, ಪ್ರತಿಕ್ರಿಯೆ ಒಳಗೊಂಡಿರುವ ಕಾರಣ ಸಾರ್ವಜನಿಕರಿಗೆ ತೊಂದರೆ ಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದನ್ನು ಸರಳೀಕರಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು;</td><td>ಬಂದಿದೆ.<br><br>ಪ್ರಸ್ತುತ ಭೂಮಾಪನ ಇಲಾಖೆಯಲ್ಲಿ ದಾಖಲಾಗುವ ಎಲ್ಲಾ ರೀತಿಯ ಮೇಲ್ಮನವಿ ಮತ್ತು ಮರುಪರಿಶೀಲನಾ ಅರ್ಜಿಗಳನ್ನು ವಿಳಂಬಕ್ಕೆ ಅವಕಾಶವಿಲ್ಲದಂತೆ ಮತ್ತು ಪಾರದರ್ಶಕವಾಗಿ ನಿರ್ವಹಿಸುವ ಸಲುವಾಗಿ RCCMS ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿದೆ.<br><br>ಪ್ರಸ್ತುತ ಇಲಾಖೆಯ ಎಲ್ಲಾ ಹಂತದ ಅರೆ-ನ್ಯಾಯಿಕ ಪ್ರಕರಣಗಳನ್ನು (ಮೇಲ್ಮನವಿ ಮತ್ತು ಪುನರೀಕ್ಷಣಾ ಅರ್ಜಿ ಹಾಗೂ ತಕರಾರು) RCCMS ತಂತ್ರಾಂಶದ ಮುಖಾಂತರ ನಿರ್ವಹಿಸಲಾಗುತ್ತಿದೆ. ಅರ್ಜಿದಾರರು ತಮ್ಮ ಅರ್ಜಿಯ ಪ್ರಸ್ತುತ ಹಂತ ಮತ್ತು ಅಂತಿಮ ಆದೇಶವನ್ನು ಆನ್‌ಲೈನ್ ಮೂಲಕ ಉಚಿತವಾಗಿ ವೀಕ್ಷಿಸಲು . ಅವಕಾಶ ಕಲ್ಪಿಸಿದೆ.</td></tr>
<tr><td>(ಈ)</td><td>ಪೋಡಿಗೆ ಒಳಪಟ್ಟ ಎಲ್ಲಾ ರೈತರೂ ಲಿಖಿತ ಒಪ್ಪಿಗೆ ಸೂಚಿಸಿದ್ದಲ್ಲಿ, ಕೋರ್ಟ್ ಪ್ರಕ್ರಿಯೆ ಇಲ್ಲದೇ ರದ್ದುಗೊಳಿಸಲು ಅವಕಾಶವಿದೆಯೇ; ಇದ್ದಲ್ಲಿ, ಇದರ ಬಗ್ಗೆ ಇರುವ ಸುತ್ತೋಲೆ ಮತ್ತು ಆದೇಶದ ಪ್ರತಿಯನ್ನು ನೀಡುವುದು;</td><td>ಪೋಡಿಗೆ ಒಳಪಟ್ಟ ಎಲ್ಲಾ ರೈತರೂ ಲಿಖಿತ ಒಪ್ಪಿಗೆ ಸೂಚಿಸಿದಲ್ಲಿ ಸಹ ಯಾವುದೇ ವಿಚಾರಣೆ (ಕೋರ್ಟ್ ಪ್ರಕ್ರಿಯೆ) ನಡೆಸದೆ / ಹಕ್ಕುದಾಖಲೆ ಮತ್ತು ಅನುಭವ ಪರಿಶೀಲಿಸದೆ · ಪೋಡಿ ದಾಖಲೆಗಳನ್ನು ರದ್ದುಗೊಳಿಸಲು ಅವಕಾಶವಿರುವುದಿಲ್ಲ.</td></tr>
<tr><td>(ಉ)</td><td>ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪೋಡಿ ರದ್ದತಿಗಾಗಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ವಿಲೇಯಾದ ಪ್ರಕರಣಗಳು ಎಷ್ಟು; ಬಾಕಿಯಿರುವ ಪ್ರಕರಣಗಳು ಎಷ್ಟು?</td><td>ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪೋಡಿ ರದ್ದು ಕೋರಿ ಸ್ವೀಕೃತವಾಗಿರುವ ಅರ್ಜಿಗಳ ವಿವರ ಈ ಕೆಳಕಂಡಂತಿದೆ:<br><table><tr><td>ಪ್ರಾ. ಶಿಲು</td><td>ಸ್ವೀಕೃತಿ</td><td>ಒಟ್ಟು</td><td>ವಿಲೆ</td><td>ಬಾಕಿ</td></tr><tr><td>389</td><td>1621</td><td>2010</td><td>1792</td><td>218</td></tr></table></td></tr>
</table>

**ಸಂಖ್ಯೆ: ಕಂಇ 164 ಎಸ್‌ಎಸ್‌ಸಿ 2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು